ಓ. ಎಸ್ . 210/2023 ಪಿ.ಡಬ್ಲ್ಯೂ - 1 ಮಲ್ಲಪ್ಪ ಮಗದುಮ್ಮ

**(ದಿನಾಂಕಃ 03-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)**

**ಪಾಟೀಸವಾಲು : ವಾದಿ ಪರ ಶ್ರೀ. ಎಸ್ ಕೆ ಎಚ್ ವಕೀಲರಿಂದ -**

ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ನಾನು 10 ನೇ ತರಗತಿಯವರೆಗೆ ಕಲಿತಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರವನ್ನ ನಾನು ಓದಿದ್ದೇನೆ. ಸತ್ಯವ್ವಾ ನಾಯ್ಕ ನನ್ನನ್ನು ಸಾಕ್ಷಿ ಹೇಳಲು ನ್ಯಾಯಾಲಯಕ್ಕೇ ಕರೆಹಿಸಿರುತ್ತಾರೆ. ಲಗಮವ್ವಾ ನಾಯ್ಕ ಈ ದಾವೆಯನ್ನು ಸತ್ಯವ್ವಾ ನಾಯ್ಕ ರವರ ವಿರುದ್ದ ಹೋಲದ ಸಲುವಾಗಿ ಹಾಕಿರುತ್ತಾರೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 48 ಎಂದು ತೋರಿಸಿದೆ. 35 ವರುಷಗಳ ಹಿಂದೆ ನಾನು 13 ವಯಸ್ಸಿನವನಿದ್ದೆ . ಸತ್ಯವ್ವಾ ಇವರು ಜಾಂಗಟಿಹಾಳ ಗ್ರಾಮದ ಲಗಮಪ್ಪ ಇವರ ಮಗಳು ಇರುತ್ತಾರೆ ಎಂದರೆ ನಿಜ. ಲಗಮಪ್ಪ ಇವರು ನಮ್ಮ ಅಣ್ಣತಮ್ಮಂದಿರು ಎಂದರೆ ನಿಜ. 35 ವರುಷದ ಹಿಂದೆ ನಾನು ಯಾವುದೇ ಪಂಚಾಯತಿ ಮಾಡುತ್ತಿರಲಿಲ್ಲ.

2. ಮುತ್ತೆಪ್ಪ ನಾಗಪ್ಪ ನಾಯ್ಕ ಜಾಂಗಟಿಹಾಳ ಗ್ರಾಮದಲ್ಲಿ ಮೃತ ಆಗಿರುತ್ತಾರೆ ಎಂದರೆ ನಿಜ. ವಾದಿಯು ಆತನ ಕಾಯ್ದೆ ಬದ್ದ ಹೆಂಡತಿ ಎಂದರೆ ಸರಿಯಲ್ಲ. ಮುತ್ತೆಪ್ಪ ತೀರಿಕೊಂಡಿದ್ದು, ಆತನ ಜಮೀನುಗಳು ಜಾಂಗಟಿಹಾಳ ಮತ್ತು ಶಿರಡಾಣ ಗ್ರಾಮಗಳಲ್ಲಿವೆ ಎಂದರೆ ನಿಜ. ಮುತ್ತೆಪ್ಪ ತೀರಿಕೊಂಡ ನಂತರ ಆತನ ಎಲ್ಲ ಜಮೀನುಗಳನ್ನು ವಾದಿಯೆ ವಹಿವಾಟು ಮಾಡಿಕೋತಾ ಬಂದಿದ್ದಾಳೆ ಎಂದರೆ ಸರಿಯಲ್ಲ. ಲಗಮವ್ವಳೆ ಮುತ್ತೆಪ್ಪ ಕಾಯ್ದೆ ಬದ್ದ ಹೆಂಡತಿ ಎಂದರೆ ಸರಿಯಲ್ಲ. ವಾದಿ ಲಗಮವ್ವ ಇತಳು ಮೃತ ಮುತ್ತೆಪ್ಪನ ಕಾಯ್ದೆ ಬದ್ದ ವಾರಸುದಾರಳು ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ಸತ್ಯವ್ವಾ ಇವಳು ಮೃತ ಮುತ್ತೆಪ್ಪನ ಕಾಯ್ದೆ ಬದ್ದ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಲಕ್ಷ್ಮಿ ಮತ್ತು ರಾಘವೆಂದ್ರ ಮೃತ ಮುತ್ತೆಪ್ಪನ ಕಾಯ್ದೆ ಬದ್ದ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ಸತ್ಯವ್ವಾ, ಲಕ್ಷ್ಮಿ ಮತ್ತು ರಾಘವೆಂದ್ರ ಮೃತ ಮುತ್ತೆಪ್ಪನ ಕಾಯ್ದೆ ಬದ್ದ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ಮುತ್ತೆಪ್ಪ ತೀರಿಕೊಂಡ ನಂತರ ಆತನ ಎಲ್ಲ ಆಸ್ತಿಗಳು ಪ್ರತಿವಾದಿ 1 ರಿಂದ 3 ಇವರುಗಳು ವಹಿವಾಟು ಮಾಡಿಕೋತಾ ಬಂದಿದ್ದಾರೆ ಎಂದು ಸುಳ್ಳು ಬರೆಸಿದ್ದೆನೆ ಎಂದರೆ ಸರಿಯಲ್ಲ. ಸತ್ಯವ್ವಾ ನಮ್ಮ ಸಂಬಂಧಿಕರಾಗಿರುವುದರಿಂದ ಅವರಿಗೆ ಅನೂಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಬರೆದ ಎಲ್ಲ ವಿಚಾರಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಾ

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**